**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.1/2022**

ಸಾಕ್ಷಿದಾರರ ಹೆಸರು : ಬಿ. ಮಂಜುನಾಥ

ತಂದೆಯ ಹೆಸರು : ಭೂತೇಶಪ್ಪ

ವಯಸ್ಸು : 47 ವರ್ಷ

ಉದ್ಯೋಗ : ಪೊಲೀಸ್ ವೃತ್ತ ನಿರೀಕ್ಷಕರು, ಸಂಚಾರಿ ವೃತ್ತ, ದಾವಣಗೆರೆ

ವಾಸ ಸ್ಥಳ : ದಾವಣಗೆರೆ

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 4

ದಿ: 10-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ದಾವಣಗೆರೆಯ ಗ್ರಾಮಾಂತರ ವೃತ್ತದ ಪೊಲೀಸ್ ವೃತ್ತ ನಿರೀಕ್ಷಕರಾಗಿ ದಿಃ 20-06-2020 ರಿಂದ ಜನವರಿ 2022 ರವರೆಗೆ ಕೆಲಸ ಮಾಡಿದ್ದೇನೆ. ನಾನು ದಿಃ 30-01-2021 ರಂದು ನಾನು ಠಾಣೆಯಲ್ಲಿರುವಾಗ ಮಧ್ಯಾಹ್ನ 1.45 ಗಂಟೆಗೆ ಚಾಸಾ-1 ರವರು ನನಗೆ ಕರೆ ಮಾಡಿ ಒಂದು ಗಾಂಜಾ ಬೆಳೆದಿರುವ ಬಗ್ಗೆ ಮಾಹಿತಿ ಇದ್ದು ಈ ಬಗ್ಗೆ ಸಿಬ್ಬಂದಿಗಳನ್ನು ಮತ್ತು ಸಲಕರಣೆಗಳನ್ನು ತೆಗೆದುಕೊಂಡು ಬಿಳಿಚೋಡು ಪೊಲೀಸ್ ಠಾಣೆಗೆ ಬರಲು ತಿಳಿಸಿದ್ದರಿಂದ ನಾನು ನಮ್ಮ ಠಾಣೆಯ ಸಿಬ್ಬಂದಿಗಳಾದ ಚಾಸಾ-5 , 7 ಮತ್ತು 9 ರವರೊಂದಿಗೆ ಮಧ್ಯಾಹ್ನ 2.45 ಗಂಟೆಗೆ ಬಿಳಿಚೋಡು ಪೊಲೀಸ್ ಠಾಣೆಗೆ ಹೋಗಿ ಚಾಸಾ-1 ರವರಲ್ಲಿ ವರದಿ ಮಾಡಿಕೊಂಡಿದ್ದೇವೆ. ಅಷ್ಟರಲ್ಲಿ ಜಗಳೂರು ಇ.ಓ. ರವರನ್ನು ಪಂಚರಾದ ಚಾಸಾ-2 ಮತ್ತು 3 ರವರನ್ನು ಕಳುಹಿಸಿಕೊಟ್ಟಿದ್ದರು. ಚಾಸಾ-1 ರವರು ಪಂಚರನ್ನು ಪರಿಚಯಿಸಿ, ಜಗಳೂರು-

ಮೆದೆಕೆರೆ ರಸ್ತೆಯ ಹೊಲದಲ್ಲಿ ಗಾಂಜಾ ಬೆಳೆದ ಬಗ್ಗೆ ಮಾಹಿತಿ ಇದ್ದು, ಹೋಗೋಣಾ ಅಂತ ಹೇಳಿದರು. ಅದರಂತೆ ಚಾಸಾ-1 ರವರು, ಪಂಚರು, ಸಿಬ್ಬಂದಿಗಳಾದ ಚಾಸಾ-5 ಮತ್ತು 6 ರವರು ಚಾಸಾ-1 ರಾರ ಜೀಪಿನಲ್ಲಿ, ನಾನು ಮತ್ತು ನಮ್ಮ ಸಿಬ್ಬಂದಿಗಳು ಹಾಗೂ ಸಲಕರಣೆಗಳನ್ನು ತೆಗೆದುಕೊಂಡು ಮಧ್ಯಾಹ್ನ 3.30 ಗಂಟೆಗೆ ಠಾಣೆಯನ್ನು ಬಿಟ್ಟು 3.50 ಗಂಟೆಗೆ ಸ್ಥಳವನ್ನು ತಲುಪಿಸಿದೆವು. ಅಜ್ಜಿಬೊಮ್ಮೇನಹಳ್ಳಿ ಸರ್ವೇ ನಂಬರ 16/7/P3 ಹೊಲದ ಹತ್ತಿರ ಹೋಗಿ ವಾಹನವನ್ನು ನಿಲ್ಲಿಸಿ, ಒಂದು ದನದ ಮನೆಯಿದ್ದು ಆ ಮನೆಯ ಹತ್ತಿರ ನಾವೆಲ್ಲರೂ ಹೋದಾಗ ಸುಮಾರು 60 ವರ್ಷದ ವಯಸ್ಸಿನ ವ್ಯಕ್ತಿ ಇದ್ದು, ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ತಮ್ಮ ಹೆಸರು ಮತ್ತು ವಿಳಾಸ ಹೇಳಿದರು. ಸದರಿ ವ್ಯಕ್ತಿಯು ನ್ಯಾಯಾಲಯದ ಮುಂದೆ ಇರುವ ಆರೋಪಿ ಇರುತ್ತಾರೆ. ಆಗ ಚಾಸಾ-1 ರವರು ಅವರಿಗೆ ತಮ್ಮ ಹೊಲದಲ್ಲಿ ಮತ್ತು ಆ ದನದ ಮನೆಯಲ್ಲಿ ಗಾಂಜಾ ಇರುವ ಬಗ್ಗೆ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಅದನ್ನು ತಿಳಿಸಿದ್ದರಿಂದ ಆರೋಪಿತನು ಒಪ್ಪಿಕೊಂಡಿದ್ದು, ನಂತರ ದನದ ಮನೆಯನ್ನು ಶೋಧನೆ ಮಾಡುವ ಮೊದಲು ನಾವೆಲ್ಲರೂ ಪರಸ್ಪರ ಅಂಗ ಶೋಧನೆ ಮಾಡಿಕೊಂಡೆವು, ನಮ್ಮ ಹತ್ತಿರ ಯಾವುದೇ ಗಾಂಜಾಕ್ಕೆ ಸಂಬಂಧಿಸಿದ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡು, ಆರೋಪಿಗೆ ಮತ್ತು ಪಂಚರಿಗೆ ಮನವರಿಕೆ ಮಾಡಿಕೊಂಡೆವು. ನಂತರ ಆರೋಪಿಯ ಒಪ್ಪಿಗೆಯನ್ನು ಪಡೆದುಕೊಂಡು ದನದ ಮನೆಯಲ್ಲಿ ಒಳಗಡೆ ಹೋಗಿ ನೋಡಿದಾಗ ಒಳಗಡೆ ದಕ್ಷಿಣ ದಿಕ್ಕಿನಲ್ಲಿ ಮರದ ಹಲಗೆಯ ಮೇಲೆ ಒಂದು ರಟ್ಟಿನ ಬಾಕ್ಸ ಇದ್ದು ಅದನ್ನು ಆರೋಪಿಯು ಚಾಸಾ-1 ರವರಿಗೆ ಹಾಜರುಪಡಿಸಿದ್ದು, ಆಗ ಪಂಚರು ಮತ್ತು ನಾವೆಲ್ಲರೂ ಸದರಿ ರಟ್ಟಿನ ಬಾಕ್ಸ್ ನ್ನು ತೆರೆದಾಗ ಅದರೊಳಗಡೆ ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ಇದ್ದು, ಅದರಲ್ಲಿ ಗಾಟು ವಾಸನೆ ಬರುತ್ತಿದ್ದು, ಆದ್ದರಿಂದ ಅದರಲ್ಲಿದ್ದ ಗಾಂಜಾ ಸೊಪ್ಪು ಮತ್ತು ಹೂವು, ಕಾಳು, ಕಾಂಡ ನೋಡಿ ಅದು ಗಾಂಜಾ ಅಂತ ಖಚಿತಪಡಿಸಿಕೊಂಡೆವು. ನಂತರ ಅದನ್ನು ತೂಕದ ಯಂತ್ರದ ಸಹಾಯದಿಂದ ತೂಕ ಮಾಡಿದಾಗ ಅದು 380 ಗ್ರಾಂ. ತೂಕ ಇತ್ತು. ಅದರಲ್ಲಿ 100 ಗ್ರಾಂ. ಗಾಂಜಾವನ್ನು FSL ಪರೀಕ್ಷೆಗಾಗಿ

ಮಾದರಿಯಾಗಿ ತೆಗೆದು KSE ಎಂಬ ಸೀಲ್ ನಿಂದ ಸೀಲ್ ಮಾಡಲಾಯಿತು. ಉಳಿದ ಗಾಂಜಾವನ್ನು ಸಹ KSE ಎಂಬ ಸೀಲ್ ನಿಂದ ಸೀಲ್ ಮಾಡಲಾಯಿತು.

2. ನಂತರ ಸದರಿ ಗಾಂಜಾವನ್ನು ಎಲ್ಲಿ ಬೆಳೆದಿದ್ದೀಯಾ ಅಂತ ಆರೋಪಿಗೆ ಕೇಳಲಾಗಿ, ಆತನು ತನ್ನ ಹೊಲದಲ್ಲಿಯೇ ಬೆಳೆದಿರುತ್ತೇನೆ. ಇನ್ನೂ ಕೆಲವು ಗಿಡಗಳು ಹೊಲದಲ್ಲಿ ಬೆಳೆದಿವೆ ಮತ್ತು ತನ್ನ ಜೊತೆ ಬಂದರೆ ತೋರಿಸುವುದಾಗಿ ಹೇಳಿದಿರುವುದರಿಂದ, ನಾವು ಮತ್ತು ಪಂಚರು ಆರೋಪಿಯನ್ನು ಹಿಂಬಾಲಿಸಿಕೊಂಡು ಹೋಗಿದ್ದು, ಆತ ತನ್ನ ಮನೆಯಿಂದ ಪಶ್ಚಿಮ ದಿಕ್ಕಿನಲ್ಲಿರುವ ಹೊಲಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬದನೆಕಾಯಿ ಗಿಡಗಳು ಇದ್ದು, ಅಲ್ಲಿ ಗಾಂಜಾ ಗಿಡಗಳನ್ನು ತೋರಿಸಿರುತ್ತಾನೆ. ಆಗ ಚಾಸಾ-1 ರವರು ಪಕ್ಕದಲ್ಲಿ ಟ್ರ್ಯಾಕ್ಟರ್ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಚಾಸಾ-8 ರವರ ಸಹಾಯದಿಂದ ಕರೆಸಿದ್ದು, ಆತನ ಹೆಸರು ಬಸವರಾಜ /ಚಾಸಾ-11 ಅಂತ ತಿಳಿಸಿದ್ದು, ಆತನಿಗೆ ಚಾಸಾ-1 ರವರು ಆರೋಪಿಯು ತೋರಿಸುವ ಗಾಂಜಾ ಗಿಡಗಳನ್ನು ಕಿತ್ತು ಕೊಡಲು ಸೂಚಿಸಿದ್ದರಿಂದ ಅದರಂತೆ ಅವನು ಆರೋಪಿಯು ತೋರಿಸಿದ ಸ್ಥಳದಲ್ಲಿ ಸುಮಾರು 32 ಗಾಂಜಾ ಗಿಡಗಳನ್ನು ಕಿತ್ತು ಚಾಸಾ-1 ರವರ ಮುಂದೆ ಹಾಜರುಪಡಿಸಿದ್ದು, ಅವುಗಳಲ್ಲಿ ಸುಮಾರು 08 ಗಿಡಗಳಲ್ಲಿ ಹೂವು, ಕಾಯಿ ಬಿಟ್ಟಿದ್ದು, ಉಳಿದ ಗಿಡಗಳಲ್ಲಿ ಹೂವು ಸೊಪ್ಪು ಕಂಡು ಬಂದಿತ್ತು. ಅವುಗಳನ್ನು ತೂಕದ ಯಂತ್ರದಲ್ಲಿ ತೂಕ ಮಾಡಿದಾಗ ಅದು 680 ಗ್ರಾಂ. ಇರುತ್ತದೆ. ಮತ್ತೆ ಹೇಳುತ್ತೇನೆ ಅದು 650 ಗ್ರಾಂ. ಇರುತ್ತದೆ. ಅವುಗಳಲ್ಲಿ ಮೂರು ಗಿಡಗಳನ್ನು ಪ್ರತ್ಯೇಕವಾಗಿ ತೆಗೆದು ಸೀಲ್ ಮಾಡಲಾಯಿತು. ಉಳಿದ ಗಿಡಗಳನ್ನು ಸಹ ಸೀಲ್ ಮಾಡಿ ವಶಕ್ಕೆ ತೆಗೆದುಕೊಳ್ಳಲಾಯಿತು. ಆ ಸಮಯದಲ್ಲಿ ಮಾಡಿದ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಅಂತ ಗುರುತಿಸಲಾಯಿತು.ಆ ಸಮಯದಲ್ಲಿ ನಿಪಿ-14 ರಿಂದ 21 ರಂತೆ ಪೋಟೋಗಳನ್ನು ತೆಗೆದರು. ನಾವು ಆ ದಿನ ವಶಪಡಿಸಿಕೊಂಡಿರುವ ಮಾಲು ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2

ಇರುತ್ತದೆ. ನಂತರ ಆರೋಪಿ ಮತ್ತು ಮಾಲಿನೊಂದಿಗೆ ಬಿಳಿಚೋಡು ಪೊಲೀಸ್ ಠಾಣೆಗೆ ದೂರು ದಾಖಲಿಸಲು ಚಾಸಾ-1 ರವರು ವರದಿಯನ್ನು ನೀಡಿದರು.

**ಪಾಟೀ ಸವಾಲುಃ ಶ್ರೀ ., ವಕೀಲರಿಂದ ಆರೋಪಿತರ ಪರವಾಗಿ**:

3. ಆ ದಿನ ನಾವು ಪೊಲೀಸ್ ಠಾಣೆಯನ್ನು ಬಿಟ್ಟಾಗ ಮಧ್ಯಾಹ್ನ 1.45 ಗಂಟೆ ಆಗಿತ್ತು. ನಾವು ಬಿಳಿಚೋಡು ಪೊಲೀಸ್ ಠಾಣೆಗೆ ಹೋದಾಗ ಮಧ್ಯಾಹ್ನ 2.45 ಗಂಟೆ ಆಗಿತ್ತು. ನಾವು ಹೋದಂತಹ ಜಮೀನು ನೀರಾವರಿ ಜಮೀನು ಅಂದರೆ ಸರಿಯಲ್ಲ. ಅದಕ್ಕೆ ಬೋರವೆಲ್ ಇರುತ್ತದೆ. ಸದರಿ ಜಮೀನಿನ ಎಲ್ಲಾ ದಿಕ್ಕಿನಲ್ಲಿ ನೀರಾವರಿ ಜಮೀನು ಇರುತ್ತವೆ ಅಂದರೆ ಸರಿಯಲ್ಲ. ಆ ಜಮೀನು ಮೆದಕೆರೆಗೆ ಹೋಗುವ ರಸ್ತೆಯ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ ಅಂದರೆ ನಿಜ. ಆ ರಸ್ತೆಯಿಂದ ಜಮೀನು 100-150 ಅಡಿ ದೂರದಲ್ಲಿ ಇರುತ್ತದೆ ಅಂದರೆ ನಿಜ. ಆ ಜಮೀನಿನ ಸುತ್ತಮುತ್ತಲು ವಿವಿಧ ಮರಗಳು ಇವೆ ಅಂದರೆ ನಿಜ. ನೀರಾವರಿ ಜಮೀನುಗಳು ಇರುವುದರಿಂದ ಅಲ್ಲಿ ಪ್ರಾಣಿ ಪಕ್ಷಿಗಳು ಓಡಾಡುತ್ತವೆ ಅಂದರೆ ನಿಜ.

4. ಆ ಮನೆಯು ಪೂರ್ವ ಮುಖವಾಗಿದೆ ಅಂದರೆ ನಿಜ. ಆ ಮನೆಯ ಡೋರ್ ನಂಬರ ನಾನು ನೋಡಿಲ್ಲ. ಆ ಮನೆಯ ದಕ್ಷಿಣ ಭಾಗದಲ್ಲಿ ಇದ್ದ ಹಲಗೆ ವಿಸ್ತೀರ್ಣ ಎಷ್ಟು ಅಂದರೆ ನೆಲದಿಂದ 05 ಅಡಿ ಎತ್ತರದಲ್ಲಿತ್ತು. ಅದರ ವಿಸ್ತೀರ್ಣ 07-08 ಅಡಿ ಉದ್ದ 01 ಅಡಿ ಅಗಲ ಇತ್ತು. ಆ ಹಲಗೆಯ ಮೇಲೆ ಏನೇನು ವಸ್ತುಗಳು ಇದ್ದವು ಅಂತ ನನಗೆ ನೆನಪಿಲ್ಲ. ಅದರ ಪೋಟೋವನ್ನು ನಾನು ತೆಗೆದಿಲ್ಲ. ನಾನು ಅಲ್ಲಿ ಚಾಸಾ-1 ರವರಿಗೆ ಪೋಟೋ ತೆಗೆಯಲು ಹೇಳಿಲ್ಲ. ಗಾಂಜಾದ ಹೂವು ಕಾಯಿಯನ್ನು ಪ್ರತ್ಯೇಕ ಮಾಡಿಲ್ಲ. ಅದನ್ನು ಪ್ರತ್ಯೇಕ ಮಾಡಬೇಕು ಅಂತ ಚಾಸಾ-1 ರವರಿಗೆ ಹೇಳಿಲ್ಲ. ನಾನು ಹೇಳಿದ ಸ್ಥಳದಲ್ಲಿ ಹಲಗೆ ಇರಲಿಲ್ಲ ಅಂದರೆ ಸರಿಯಲ್ಲ. ಆ ಹೊಲದ ಪಶ್ಚಿಮ ದಿಕ್ಕಿನಲ್ಲಿ ಬದನೆಕಾಯಿ ಗಿಡಗಳು ಇದ್ದ, ಆ ಬದನೆಗಿಡಗಳು ಉತ್ತರ-ದಿಕ್ಷಿಣ ದಿಕ್ಕಿನಲ್ಲಿದ್ದವು. ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಬದನೆಗಿಡಗಳು ಇದ್ದವು ಅಂತ ಹೇಳಲು ಬರುವುದಿಲ್ಲ. ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಗಾಂಜಾ ಗಿಡಗಳು ಇದ್ದವು ಅಂತ

ಹೇಳಲು ಬರುವುದಿಲ್ಲ. ಆ 32 ಗಿಡಗಳಲ್ಲಿ ಎಷ್ಟು ಗಿಡಗಳಲ್ಲಿ ಹೂವು ಕಾಯಿ ಇತ್ತು ಅಂದರೆ 08 ಗಿಡಗಳಲ್ಲಿ ಗಾಂಜಾದ ಹೂವು ಮತ್ತು ಕಾಯಿ ಇತ್ತು. ಆ ಗಿಡಗಳಲ್ಲಿರುವ ಹೂವು ಮತ್ತು ಕಾಯಿಯನ್ನು ನಾವು ಪ್ರತ್ಯೇಕ ಮಾಡಿಲ್ಲ. ಈ ಬಗ್ಗೆ ನಾನು ಚಾಸಾ-1 ರವರಿಗೆ ಮಾರ್ಗದರ್ಶನ ಮಾಡಿಲ್ಲ. ಉಳಿದ ಗಿಡಗಳಲ್ಲಿ ಹೂವು ಮತ್ತು ಕಾಯಿಯನ್ನು ಬೇರ್ಪಡಿಸಿಲ್ಲ. ಬೇರ್ಪಡಿಸಬೇಕು ಅಂತ ನಾನು ಮೇಲಾಧಿಕಾರಿಗಳಿಗೆ ಹೇಳಿಲ್ಲ. ಆರೋಪಿಯು ಹೊಲದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರಲಿಲ್ಲ ಅಂದರೆ ಸರಿಯಲ್ಲ. ದನದ ಮನೆಯಲ್ಲಿ ಗಾಂಜಾ ಗಿಡಗಳು ಇದ್ದವು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.